<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.183/2022</u>

PW- 13

CW- 09

ಪ್ರ. ಬೋ. ದಿನಾಂಕಃ 09-07-2024

ಹೆಸರು ಶ್ರೀ/ ಶ್ರೀಮತಿ : ಪ್ರಕಾಶ್

ತಂದೆ/ಗಂಡನ ಹೆಸರು : ನಾಗಪ್ಪ

ವಯಸ್ಸು : 45 ವರ್ಷ

ಉದ್ಯೋಗ : ಕೂಲಿ

ವಾಸ : ಶಾಘುಲೆ ಗ್ರಾಮ ,

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ದೊಡ್ಡಪ್ಪ , ಅವರಿಗೆ ಮೂರು ಜನ ಗಂಡು ಮಕ್ಕಳು , ಎರಡು ಹೆಣ್ಣುಮಕ್ಕಳು. ಗೌರಮ್ಮ ಅವರ ಚಿಕ್ಕಮಗಳು ಇರುತ್ತಾಳೆ. ಸದರಿ ಗೌರಮ್ಮ ರವರನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿದ್ದರು. ಗೌರಮ್ಮ ಮತ್ತು 1 ನೇ ಆರೋಪಿ ದ್ಯಾಂಪತ್ಯದಿಂದ ಒಂದು ಮಗು ಜನಿಸಿತ್ತು. ಅವರ ಮದುವೆಯಾದ ನಂತರ ಗೌರಮ್ಮ ತನ್ನ ಗಂಡನ ಮನೆಯಲ್ಲಿ ವಾಸಮಾಡಿಕೊಂಡಿದ್ದರು. ನನ್ನ ಮನೆ 1 ನೇ ಆರೋಪಿಯ ಮನೆಯಿಂದ ಸ್ವಲ್ಪ ದೂರದಲ್ಲಿದೆ.

ಗಂಡ ಹೆಂಡತಿ ಸ್ವಲ್ಪ ದಿನ ಚನ್ನಾಗಿದ್ದರು, ನಂತರ ಜಗಳವಾಡುತ್ತಿದ್ದರು , ಆಗ ನಾನು ಹೋಗಿ ಗಲಾಟೆ ಮಾಡಬೇಡ , ಇಬ್ಬರು ಹೊಂದಿಕೊಂಡು ಚನ್ನಾಗಿರಿ ಎಂದು ಬುದ್ದಿವಾದ ಹೇಳುತ್ತಿದ್ದೆ. ಆಗ ಅವರು ಆಯಿತು ಎಂದು ಹೇಳುತ್ತಿದ್ದರು. ನಂತರ ಗೌರಮ್ಮ ನೇಣು ಹಾಕಿಕೊಂಡಿದ್ದಾಳೆ ಎಂದು ಹೇಳಿದರು , ನಾವು ಹೋದೆವು. ಯಾವ ಕಾರಣಕ್ಕಾಗಿ ನೇಣುಹಾಕಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ಗಂಡ ಹೆಂಡತಿ ಜಗಳ ಮಾಡುತ್ತಿದ್ದಾಗ ನಾನು ಬುದ್ದಿವಾದ ಹೇಳಲು ಹೋದಾಗ ನೀನ್ಯಾರು ಹೇಳಲು ಎಂದು ಹೇಳಿ ನನಗೆ ಬೈದು ಕಳುಹಿಸುತ್ತಿದ್ದರು ಎನ್ನುವುದು ಸರಿಯಲ್ಲ. ನೀನು ಜೀವಂತ ಇದ್ದರೆ ಏನೂ ಪ್ರಯೋಜನೆ ಇಲ್ಲ , ಆದ್ದರಿಂದ ನೀನು ವಿಷ ಕುಡಿದು ಸಾಯಿ , ನೇಣು ಹಾಕಿಕೊಂಡು ಸಾಯಿ ಎಂದು ಆರೋಪಿತರು ಗೌರಮ್ಮ ರವರಿಗೆ ಪ್ರಚೋದನೆ ಮಾಡಿದ್ದು ಮಾನಸಿಕವಾಗಿ ದೈಹಿಕವಾಗಿ ನೊಂದುಕೊಂಡು ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಿರುತ್ತಾರೆ ಎಂದು ನಾನು ಪೊಲೀಸರ ಮುಂದೆ ನಿಪಿ.17 ರಂತೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀಸವಾಲುಃ- ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ನನ್ನ ಮನೆ ತ್ಯಾವಣಿ ರಸ್ತೆಯಲಿದೆ. ಆರೋಪಿತರ ಮನೆ ಊರ ಮಧ್ಯದಲ್ಲಿದೆ. 1 ನೇ ಆರೋಪಿ ಮತ್ತು ಮೃತ ಗೌರಮ್ಮ ಇವರು ಚನ್ನಾಗಿದ್ದರು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.